

**ಶೇಷನಾರಾಯಣ**

'ಮಯೂರ'ದ ಅರ್ಧ ಶತಮಾನದ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಓದುಗರ ಮುಂದಿಡುತ್ತದೆ. 1998–1999ರ ಅವಧಿಯಲ್ಲಿ ಪ್ರಕಟವಾಗಿದ್ದ ಆಯ್ದ ಅಂಕಣ ಬರಹಗಳು ಇಲ್ಲಿವೆ.

# ತ.ರಾ.ಸು.

ಆಗ ಮೈಸೂರಿನಲ್ಲಿ ಆಟೋ ಇರಲಿಲ್ಲ. ಮೈಸೂರು ಜಟಕಾ–ಟಾಂಗಾ ಎಂದರೇ ಪ್ರಸಿದ್ಧ. ಜಟಕಾದೊಂದಿಗೆ ಮೈಸೂರು ಮಲ್ಲಿಗೆ, ಮೈಸೂರು ಚಿಗುರು ವೀಳ್ಯದೆಲೆ, ಮೈಸೂರು ಈರನಗೆರೆ ಬದನೆಕಾಯಿ ಇವೆಲ್ಲವೂ ಪ್ರಸಿದ್ಧ.

ಅಂಥ ಒಂದು ಟಾಂಗಾದಲ್ಲಿ ತರಾಸು (ತ.ರಾ. ಸುಬ್ಬರಾವ್ ಎಂದರೆ ಯಾರಿಗೆ ಅರ್ಥವಾದೀತು) ಬರಿದಾದ ಜೇಬಿನಲ್ಲಿ ನಗರ ಪ್ರದಕ್ಷಿಣೆಗೆ ಹೊರಟು ಬಿಡುತ್ತ ಇದ್ದರು.

ಹೌದು, ತರಾಸು ಜೇಬಿಗೆ ಯಾವಾಗಲೂ ದೊಡ್ಡ ತೂತು.

ಹಾಗೆ ನೋಡಿದರೆ, ಆಗಿನ ಕಾಲದಲ್ಲಿ ಅನಕೃ ಮತ್ತು ತರಾಸು ಇವರಿಬ್ಬರಿಗೂ ಬರಹದಲ್ಲಿ ಸಾಕಷ್ಟು ಹಣ ಸಿಗುತ್ತ ಇತ್ತು. ಬರವಣಿಗೆಯಿಂದ ಹಣ ಸಂಪಾದಿಸುತ್ತ ಇದ್ದವರು ಇವರಿಬ್ಬರೇ! ಬಿಸಿ ಬಿಸಿ ದೋಸೆಗಳಂತೆ ಇವರ ಕಾದಂಬರಿಗಳು